ಸವಾಲುಗಳಿದ್ದವು. ಕಾಲೇಜು ತನ್ನ ಐತಿಹಾಸಿಕ ಭವ್ಯ ಕೀರ್ತಿಯನ್ನು ಕಳೆದುಕೊಳ್ಳತೊಡಗಿದ್ದ ಸಂಕಷ್ಟದ ಕಾಲವದು. ಕ್ಯಾಂಪಸ್ಸಿನ ಕಸ ತೆಗೆಯುವುದರಿಂದ ಮೊದಲುಗೊಂಡು, ಶೈಕ್ಷಣಿಕ-ಸಾಂಸ್ಕೃತಿಕ ಮಟ್ಟ ಸುಧಾರಿಸುವವರೆಗೂ ಎಲ್ಲ ಕೆಲಸಗಳು ಕಾಯ್ದುಕೊಂಡಿದ್ದವು. ಒಂದು ಕಾಲಕ್ಕೆ ವಿ.ಕೃ. ಗೋಕಾಕರಂಥ ಮಹಾನುಭಾವರು ಪ್ರಿನ್ಸಿಪಾಲ್ ಆಗಿದ್ದಾಗ ಯಾವ ಥರಾ ಶಿಸ್ತಿನ ವಾತಾವರಣವಿತ್ತೋ ಅದನ್ನೇ ಮರುಸ್ಥಾಪಿಸುವ ಸಂಕಲ್ಪತೊಟ್ಟ ನಾನು, ಹತ್ತು ವರ್ಷಗಳ ಕಾಲ ಹಗಲಿಡೀ ಎಲ್ಲ ಬಗೆಗಳಲ್ಲಿ ಗುರಿ ಸಾಧಿಸಲು ಶ್ರಮಿಸಿದೆ. ಯಶಸ್ಸು ಸಿಗದಿರಲು ಹೇಗೆ ಸಾಧ್ಯ? ನನ್ನೊಂದಿಗೆ ಸಹೋದ್ಯೋಗಿಗಳು, ವಿದ್ಯಾರ್ಥಿಗಳು, ಸಿಬ್ಬಂದಿ ಎಲ್ಲರೂ ಶ್ರಮಿಸಿದರು. ಅದು ಕಾಲೇಜಿನ 'ಸುವರ್ಣಯುಗ'ವೆಂದೇ ಎಲ್ಲರೂ ಇಂದಿಗೂ ನೆನೆಸುತ್ತಾರೆ. ನಾನು ನಿವೃತ್ತಿ ಹೊಂದುವಾಗ ನಾನು ಓದಿದ ನನ್ನ ಕಾಲೇಜು ಒಂದು ಆದರ್ಶ ವಿದ್ಯಾಸಂಸ್ಥೆಯೆಂದು ಹೆಸರು ಪಡೆದ ತೃಪ್ತಿ ನನಗಿತ್ತು.

**◆ ಉತ್ತರ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆಯಾಗಿ ನಿಮ್ಮ ಅನುಭವ ಹೇಗಿತ್ತು?**

ನಮ್ಮ ಉತ್ತರ ಕರ್ನಾಟಕ ಲೇಖಕಿಯರ ಸಂಘವು 1985ರಲ್ಲಿ ಸ್ಥಾಪನೆಯಾಯಿತು. ಮೊದಲೆರಡು ವರ್ಷ ದಿ. ಡಾ. ಸರೋಜಿನಿ ಚವಲಾರ ಅಧ್ಯಕ್ಷೆಯಾಗಿದ್ದರು. ನಂತರದ ನಾಲ್ಕು ವರ್ಷ ನಾನು ಕಾರ್ಯಾಧ್ಯಕ್ಷೆಯಾಗಿ, ಮುಂದೆ ನಾಲ್ಕು ವರ್ಷ ಅಧ್ಯಕ್ಷೆಯಾಗಿ, ನಂತರದ ವರ್ಷಗಳಲ್ಲಿ ಸಲಹಾ ಸಮಿತಿ ಸದಸ್ಯೆಯಾಗಿ, ಸತತ ನಾಲ್ವತ್ತು ವರ್ಷಗಳ ಕಾಲ ಕಟ್ಟಿದ, ಬೆಳೆಸಿದ, ಪ್ರೀತಿಸಿದ ಸಂಸ್ಥೆಯದು. ಈ ದೀರ್ಘ ಅವಧಿಯಲ್ಲಿ ಅನೇಕ ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಗೋಷ್ಠಿಗಳು, ವಿಚಾರ ಸಂಕಿರಣಗಳು, ಸಮ್ಮೇಳನಗಳು, ಸಮಾವೇಶಗಳು ಭರ್ಜರಿಯಾಗಿ ನಡೆಯುತ್ತಲೇ ಬಂದಿವೆ, ಸರ್ಕಾರದಿಂದ ಯಾವುದೇ ನಿಯಮಿತ ಗ್ರ್ಯಾಂಟ್ ಇತ್ಯಾದಿ ಇಲ್ಲದೇನೇ. ಹೆಚ್ಚಾಗಿ ಪದಾಧಿಕಾರಿಗಳು, ಸದಸ್ಯೆಯರು ನಿಸ್ವಾರ್ಥ ಭಾವದಿಂದ, ಬದ್ಧತೆಯಿಂದ ಪರಿಶ್ರಮಪಟ್ಟು ಸಂಘವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಜಾತಿ-ಮತ-ಪಂಥ-ರಾಜಕಾರಣ ಇತ್ಯಾದಿ ವಿಷಮತೆಗಳಿಂದ ಸಂಘವು ಕಲುಷಿತವಾಗಲು ಇಲ್ಲಿಯವರೆಗಂತೂ ಬಿಟ್ಟಿಲ್ಲ. ಮುಂದಿನದು ಹೇಳಲಾರೆ. ಆದರೆ, ಒಂದು ನೋವು-ಅಸಮಾಧಾನ ನಮ್ಮೆಲ್ಲರಿಗೂ ಇದೆ. ಮಹಿಳೆಯರು, ಹೆಚ್ಚಾಗಿ ಗೃಹಿಣಿಯರು, ಇಷ್ಟು ವರ್ಷ ಅರ್ಥಪೂರ್ಣವಾಗಿ ನಡೆಸಿಕೊಂಡು ಬಂದ ಈ ಸಂಸ್ಥೆಗೆ ನಿಯಮಿತ ಅನುದಾನವಿಲ್ಲ. ನಮಗೊಂದು ಸ್ವಂತ ಕಟ್ಟಡವೂ ಇಲ್ಲ. ಉತ್ತರ ಕರ್ನಾಟಕದವರೆಂದೇ ನಾವು ನಿರ್ಲಕ್ಷಿತರಾಗಿದ್ದೇವೇನೋ ಅನಿಸುತ್ತದೆ.

**◆ ನಿಮ್ಮ ಸೃಜನಶೀಲ ಬರವಣಿಗೆ ಬರದೇ ತುಂಬಾ ಕಾಲವಾಯಿತು. ಈ ಮೌನಕ್ಕೆ ಕಾರಣವೇನು?**

ಇದು ನನಗೆ ನಾನೇ ಕೇಳಿಕೊಳ್ಳುತ್ತಿರುವ ಪ್ರಶ್ನೆ. ನಾನು ಧಾರವಾಡದ ಪ್ರತಿಷ್ಠಿತ ಕರ್ನಾಟಕ ಕಾಲೇಜಿನ ಪ್ರಾಚಾರ್ಯಳಾಗಿ ಹಲವು ವರ್ಷ ಕೆಲಸ ಮಾಡಿದೆ. ಅಲ್ಲಿನ ಆಡಳಿತಾತ್ಮಕ ಕೆಲಸಗಳಲ್ಲಿ ಮುಳುಗಿಹೋದೆ. ಅದರಿಂದ ನನ್ನ ಬರವಣಿಗೆ ಹಿಂದೆ ಬಿತ್ತು. ನಂತರ ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ತೊಡಗಿಕೊಂಡೆ. ಏನೇ ಕಾರಣ ಹೇಳಿದರೂ ಒಂದು ನೆಪ ಅನಿಸುತ್ತದೆ. ನಿಜವಾದ ಕಾರಣವೆಂದರೆ, ಸ್ವತಃದ ಕ್ರಿಟಿಕಲ್ ಆ್ಯಟಿಟ್ಯುಡ್ ಬೆಳೆದಂತೆ, ನನ್ನ ನಿರೀಕ್ಷೆಗೆ ತಕ್ಕಂತೆ ನನಗೇ ಬರೆಯಲು ಕಷ್ಟವೆನಿಸುತ್ತದೆ, ನಮ್ಮ ಶ್ರೇಷ್ಠತೆಯ ಮಾನದಂಡಗಳು ನಮ್ಮ ಜೊತೆಯೇ ಬೆಳೆಯುತ್ತಾ ಹೋಗುತ್ತವೆ. ನನಗೇ ಸಮಾಧಾನಕರ ಅನಿಸುವಂತೆ ಬರೆಯುವುದು ಕಷ್ಟವೆನಿಸುತ್ತದೆ. ಆದರೆ ಅಸಾಧ್ಯವೆಂದಲ್ಲ. ನನ್ನದೇ ಒಂದು ಒಳ್ಳೆಯ ಕೃತಿ ಬರಬೇಕೆಂದು ನನಗನಿಸುತ್ತದೆ. ಬರುತ್ತಾ ಇದೆ ಅಂತಾನೂ ಅನಿಸುತ್ತದೆ.

**◆ ನಾವೆಲ್ಲ ಅದಕ್ಕಾಗಿ ಕಾದಿದ್ದೇವೆ. ಧನ್ಯವಾದಗಳು.**

●

